# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ ಕಛೇರಿ: 0821-2343384
ಫ್ಯಾಕ್ಸ್ ಸಂ.: 0821-2417107
E-Mail: gmhrd@cescmysore.org
Web :www.cescmysore.org
CIN: U40109KA2004SGC035177

ನಿಗಮ ಕಛೇರಿ
ನಂ. 29, ವಿಜಯನಗರ 2ನೇ ಹಂತ
ಹಿನಕಲ್ ಮೈಸೂರು-570017

ಕ್ರಮಾಂಕ : ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/2020-21 / CYS-510 ದಿನಾಂಕ: 24 JUL 2020
ಲಗತ್ತು:

## ಸುತ್ತೋಲೆ

**ವಿಷಯ:** ನಿರ್ವಹಣಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಬಗ್ಗೆ.

*******

ಚಾವಿಸನಿನಿ ವ್ಯಾಪ್ತಿಯಲ್ಲಿ ವಿದ್ಯುತ್ ಅವಘಡ ಹಾಗೂ ವಿದ್ಯುತ್ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಿಗಮ ಕಛೇರಿಯಿಂದ ಹಲವಾರು ಪರಿಣಾಮಕಾರಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿರುವುದು ಎಲ್ಲಾ ಅಧಿಕಾರಿ ವರ್ಗ/ನೌಕರರಿಗೆ ತಿಳಿದಿರುವ ವಿಷಯವಾಗಿದೆ. ಸುರಕ್ಷಿತ ಸಾಮಗ್ರಿಗಳ ಸರಬರಾಜು ಹಾಗೂ ಕರ್ತವ್ಯ ನಿರ್ವಹಣೆಯ ಬಗ್ಗೆ ತರಬೇತಿಗಳನ್ನು ಸಿಬ್ಬಂದಿಗಳಿಗೆ, ಮೇಲ್ವಿಚಾರಣೆ ಅಧಿಕಾರಿಗಳಿಗೆ ಆಗ್ಗಿಂದಾಗ್ಗೆ ನಿಗಮದ ವತಿಯಿಂದ ಏರ್ಪಡಿಸಲಾಗುತ್ತಿದೆ. ಇಷ್ಟಾದರೂ ಸಹ ನಿರ್ವಹಣಾ ಸಿಬ್ಬಂದಿಗಳು ಮತ್ತು ಕರ್ತವ್ಯ ನಿರತ ಮಾರ್ಗದಾಳುಗಳು ಕರ್ತವ್ಯ ನಿರ್ವಹಿಸುವ ಮೊದಲು ಸುರಕ್ಷಿತ ವಲಯವನ್ನು ನಿರ್ಮಿಸದೆ, ಸುರಕ್ಷಣಾ ಸಲಕರಣೆಗಳನ್ನು ಬಳಸದೆ ಇರುವುದರಿಂದ ವಿದ್ಯುತ್ ಅಪಘಾತದಿಂದ ಮರಣ/ಅಂಗವಿಕಲತೆಯು ಉಂಟಾಗುತ್ತಿರುವ ಪ್ರಕರಣಗಳು ಸಂಭವಿಸುತ್ತಿದೆ. ಕೆಲಸ ನಿರ್ವಹಿಸಲು ಅನುಸರಿಸಬಹುದಾದ ಸೂಕ್ತ ಸುರಕ್ಷತಾ ಅಗತ್ಯ ಕ್ರಮಗಳನ್ನು ಅನುಸರಿಸದೆ, ಕೆಲಸ ನಿರ್ವಹಿಸುತ್ತಿರುವುದು ವಿದ್ಯುತ್ ಅಪಘಾತಗಳು ಸಂಭವಿಸಲು ಕಾರಣವಾಗಿರುತ್ತದೆ. ಕೆಲವೊಂದು ಅಪಘಾತವು ಕೆಲಸ ನಿರ್ವಹಿಸುತ್ತಿರುವ/ಕೆಲಸ ನಿರ್ವಹಣೆಗೆ ನಿಯೋಜಿಸಲ್ಪಟ್ಟ ಸಿಬ್ಬಂದಿಯ ಸ್ಪಷ್ಟ ನಿರ್ಲಕ್ಷತೆಯಿಂದ ಸಂಭವಿಸಿರುತ್ತದೆ. ಈ ಹಿಂದೆ ಸಂಭವಿಸಿರುವ ಹಲವು ಅಪಘಾತಗಳನ್ನು ಅವಲೋಕಿಸಿದಾಗ ನಿಗಮದ ಮೇಲ್ವಿಚಾರಣಾ ಅಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು ಅಷ್ಟೇ ಅಲ್ಲದೆ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ಸುರಕ್ಷತಾ ಕ್ರಮವನ್ನು ಅನುಸರಿಸದಿಲ್ಲದಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

ನಿಗಮದಿಂದ ಈಗಾಗಲೇ ನೀಡಲಾಗಿರುವ ಎಲ್ಲಾ ರೀತಿಯ ಸುರಕ್ಷತಾ ಸಾಧನಗಳಾದ ಹೆಲ್ಮೆಟ್, ಕೈಗವಸು, ಗಮ್‌ಬೂಟ್ಸ್, ಅರ್ಥಿಂಗ್ ರಾಡ್‌ಗಳನ್ನು ಬಳಸಿಕೊಂಡು, ಫೀಡರ್‌ನ ಮಾರ್ಗ ಮುಕ್ತತೆಯನ್ನು ಪಡೆದು ಕಾರ್ಯನಿರ್ವಹಿಸಿದ್ದಲ್ಲಿ ಅಪಘಾತಗಳನ್ನು ತಪ್ಪಿಸಬಹುದಾಗಿರುತ್ತದೆ.

ಅತಿಯಾದ ಆತ್ಮವಿಶ್ವಾಸದಿಂದ ಮತ್ತು ನಿರ್ಲಕ್ಷತನದಿಂದ ಕೆಲಸ ನಿರ್ವಹಿಸಲು ಸಿಬ್ಬಂದಿಗಳು ಮುಂದಾಗುತ್ತಿದ್ದು, ದುರ್ಘಟನೆಗಳು ಸಂಭವಿಸಿ ಹಲವು ಅಮೂಲ್ಯ ಸಿಬ್ಬಂದಿಗಳು ಶಾಶ್ವತ ವಿಕಲಾಂಗತೆ/ಮರಣ ಹೊಂದುತ್ತಿರುವುದರಿಂದ ಅವರ ಸೇವೆಯನ್ನು ನಿಗಮವು ಕಳೆದುಕೊಳ್ಳುತ್ತಿರುವುದು ಎಲ್ಲಾ ಅಧಿಕಾರಿ/ನೌಕರರ ಗಮನದಲ್ಲಿ ಇದ್ದರೂ ಸಹ ಸುರಕ್ಷಿತ ವಲಯವನ್ನು ನಿರ್ಮಿಸಿಕೊಳ್ಳದೆ, ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡುತ್ತಿರುವ ಕ್ರಮವು ತೀವ್ರ ಆಕ್ಷೇಪಣಾರ್ಹವಾಗಿರುತ್ತದೆ.

ವೃತ್ತ/ವಿಭಾಗ/ಉಪವಿಭಾಗ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಸಿಬ್ಬಂದಿಗಳ ಮುಖಾಂತರ/ಗುತ್ತಿಗೆದಾರರ ಮುಖಾಂತರ ಕಾಮಗಾರಿಗಳನ್ನು ನಿರ್ವಹಿಸುವಾಗ ಸಂಬಂಧಿಸಿದ ಶಾಖಾಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಅನುಸರಿಸದ ಬಗ್ಗೆ ಮೇಲುಸ್ತುವಾರಿ ನಡೆಸಿ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮವಹಿಸುವುದು ತಪ್ಪಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

ಪು.ತಿ.ನೋ.

ಮುಂದಿನ ದಿನಗಳಲ್ಲಿ ಮೇಲುಸ್ತುವಾರಿ ಅಧಿಕಾರಿಗಳು ಸುರಕ್ಷಿತ ಕ್ರಮವನ್ನು ಅನುಸರಿಸದೆ /ಸೂಚನೆ ನೀಡದೆ ಸಿಬ್ಬಂದಿ ವರ್ಗದವರನ್ನು ಅಥವಾ ಕಾರ್ಯಪ್ರೇಷಣೆಗೊಂಡ ಗುತ್ತಿಗೆದಾರರ ತಂಡವನ್ನು ವಿದ್ಯುತ್ ಮಾರ್ಗದಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಟ್ಟಲ್ಲಿ ಅಥವಾ ಪ್ರೋತ್ಸಾಹಿಸಿದ್ದಲ್ಲಿ, ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದಲ್ಲದೇ ಇದರಿಂದ ನಿಗಮಕ್ಕೆ ಉಂಟಾಗುವ ಆರ್ಥಿಕ ನಷ್ಟವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

| |
|---|
| ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ<br>ಅನುಮೋದಿಸಲ್ಪಟ್ಟಿದೆ |

RK

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾವಿಸನಿನಿ., ಮೈಸೂರು.

**ಪ್ರತಿಗಳು:**

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು/ಹಾಸನ ರವರ ಮಾಹಿತಿಗಾಗಿ.
- ಅಧೀಕ್ಷಕ ಇಂಜಿನಿಯರ್(ವಿ), ನಗರ ಕಾಮಗಾರಿ ವೃತ್ತ/ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ, ಮೈಸೂರು/ ಮಂಡ್ಯ/ಹಾಸನ ರವರ ಮಾಹಿತಿಗಾಗಿ ಹಾಗೂ ಅನುಪಾಲನಾ ಕ್ರಮಕ್ಕಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು, ಎಂಐಎಸ್ ಶಾಖೆ, ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು – ಇವರು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗೂ ಅನುಪಾಲನಾ ಕ್ರಮಕ್ಕಾಗಿ.
- ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗೂ ಅನುಪಾಲನಾ ಕ್ರಮಕ್ಕಾಗಿ.
- ಆ.ಕಾ.–ವ್ಯ.ನಿ/ನಿ(ತಾಂ)/ಆ.ಸ.
- ಹಿಸ/ಪ್ರ.ಕ.